ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) ಕುಂದಾಪುರ ತಾಲ್ಲೂಕು ಕಿರಿಯ ಪ್ರಾಥಮಿಕ ಶಾಲೆ, ಹೊಸಮಠ, ಕೂರ್ಗಿ ಗ್ರಾಮದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 96 ಹಾಗೂ ಅಧ್ಯಾಪಕರ ಸಂಖ್ಯೆ 2.

ಆ) ಪ್ರಾಥಮಿಕ ಶಾಲೆಯಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ 96. ಹಾಜರಾತಿ 70. ಇವುಗಳಲ್ಲಿ ಪರಿಶಿಷ್ಟ ಜಾತಿ -6 ಹೊರಗ -29 ಇರುತ್ತದೆ.

ವಿಷಯ :- ದ. ಕ. ಜಿಲ್ಲೆಯಲ್ಲಿ ಒಬ್ಬರೇ ಅಧ್ಯಾಪಕರಿರುವ ಕಿರಿಯ **ಪ್ರಾಥಮಿಕ ಶಾಲೆಗಳ ಸಂಖ್ಯೆ.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 765 (1619)

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬರೇ ಅಧ್ಯಾಪಕರಿರುವ ಕಿರಿಯ ಪ್ರಾಥಮಿಕ ಶಾಲೆಗಳೆಷ್ಟು?

ಆ) ಎರಡು ಹುದ್ದೆಗಳು ಮಂಜೂರಾದ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬರನ್ನು ಬೇರೆಡೆಗೆ ನಿಯುಕ್ತಿಗೊಳಿಸಿ ಒಬ್ಬನೇ ಕೆಲಸ ಮಾಡುವ ಕಿರಿಯ ಪ್ರಾಥಮಿಕ ಶಾಲೆಗಳೆಷ್ಟು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬರೇ ಅಧ್ಯಾಪಕರಿರುವ ಶಾಲೆಗಳ ಸಂಖ್ಯೆ-39

ಆ) ಎರಡು ಹುದ್ದೆಗಳು ಮಂಜೂರಾಗಿದ್ದು ಒಬ್ಬರನ್ನು ಬೇರೆ ಕಡೆಗೆ ನಿಯೋಜಿಸಿರುವ ಶಾಲೆಗಳ ಸಂಖ್ಯೆ -51

ವಿಷಯ :- ವಾಣಿಜ್ಯ ವಿದ್ಯಾಶಾಲೆಯನ್ನು ತೆರೆಯಲು ಇರತಕ್ಕ ನಿಯಮಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 766 (1484)

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ವಾಣಿಜ್ಯ ವಿದ್ಯಾಶಾಲೆಯನ್ನು ತೆರೆಯಲು ಸರ್ಕಾರದವರು ರೂಪಿಸಿರುವ ನಿಯಮಗಳೇನು? ಒಂದು ವಾಣಿಜ್ಯ ವಿದ್ಯಾಶಾಲೆಗೂ ಮತ್ತೊಂದು ವಾಣಿಜ್ಯ ವಿದ್ಯಾಶಾಲೆಗೂ ಅಂತರವನ್ನೇನಾದರೂ ನಿಗಧಿಪಡಿಸಲಾಗಿದೆಯೇ?